**ಕರ್ನಾಟಕ ಸರ್ಕಾರ**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03**

ಸಂಖ್ಯೆ:ಕಶಾಪ&ಮೌ.ನಿ.ಮಂ/ಪಿಯು ಪ್ರ.ಕೋ/2025-26 ದಿನಾಂಕ: 16.10.2025

# ಜ್ಞಾಪನ

**ವಿಷಯ: 2025-26 ನೇ ಶೈಕ್ಷಣಿಕ ಸಾಲಿಗೆ ದ್ವಿತೀಯ ಪಿಯುಸಿ ತರಗತಿಗಳಿಗೆ ಬೋಧಿಸುತ್ತಿರುವ ವಿಷಯಗಳ ಪ್ರಶ್ನೆಕೋಠಿಗಳನ್ನು ಪರಿಷ್ಕರಣೆ ಮಾಡುವ ಸಂಬಂಧ ಸಲಹೆ/ಸೂಚನೆಗಳನ್ನು ಆಹ್ವಾನಿಸುವ ಕುರಿತು.**

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 2025-26ನೇ ಶೈಕ್ಷಣಿಕ ಸಾಲಿಗೆ ದ್ವಿತೀಯ ಪಿಯುಸಿ ತರಗತಿಗಳಿಗೆ ಬೋಧಿಸುತ್ತಿರುವ ವಿಷಯಗಳಿಗೆ ವಿಷಯ ತಜ್ಞರಿಂದ ಪ್ರಶ್ನೆಕೋಠಿಯನ್ನು ರಚಿಸಿ, ಅವುಗಳಲ್ಲಿರುವ ಪ್ರಶ್ನೆಗಳನ್ನು **ಸುಲಭ, ಮಧ್ಯಮ ಮತ್ತು ಕಠಿಣ (EASY, AVERAGE and DIFFICULT)** ಎಂದು ಶ್ರೇಣೀಕರಿಸಿ ಮಂಡಲಿಯ https://kseab.karnataka.gov.in/info-4/P+U+C/Question+Papers+-+II+PUC/kn ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

ಸದರಿ ಪ್ರಶ್ನೆಕೋಠಿಗಳನ್ನು ಪರಿಷ್ಕರಿಸುವ ಸಂಬಂಧ ವಿದ್ಯಾರ್ಥಿಗಳು ಹಾಗೂ ಸಂಬಂಧಿಸಿದ ವಿಷಯಗಳನ್ನು ಬೋಧಿಸುತ್ತಿರುವ ಉಪನ್ಯಾಸಕರುಗಳಿಂದ ಮಾತ್ರ ಸಲಹೆ ಮತ್ತು ಸೂಚನೆಗಳನ್ನು ಆಹ್ವಾನಿಸಲಾಗಿದ್ದು, ದಿನಾಂಕ: 25.10.2025 ರೊಳಗಾಗಿ ಪೂರಕ ದಾಖಲೆ/ವಿವರಗಳೊಂದಿಗೆ ಕೆಳಕಂಡ ಅಂಶಗಳಿಗೆ ಮಾತ್ರ ಸೀಮಿತವಾಗಿರುವಂತೆ ಸಲ್ಲಿಸಲು ತಿಳಿಸಿದೆ.

1. ದ್ವಂದ್ವಾರ್ಥ ಇರುವ ಪ್ರಶ್ನೆಗಳು.
2. ಪಠ್ಯಕ್ರಮದಿಂದ ಹೊರತಾದ ಉತ್ತರವನ್ನು ನಿರೀಕ್ಷಿಸುವ ಪ್ರಶ್ನೆಗಳು.
3. ಪ್ರಶ್ನೆಕೋಠಿಗೆ ಹೊಸದಾಗಿ ಸೇರಿಸಬಹುದಾದ ಪ್ರಶ್ನೆಗಳು.

ನಿಗಧಿತ ಕಾಲಮಿತಿಯೊಳಗೆ ತಮ್ಮ ಸಲಹೆ/ಸೂಚನೆಗಳನ್ನು ಇ-ಮೇಲ್ ವಿಳಾಸ: 2ndpucquestionbank@gmail.com ಗೆ ಸಲ್ಲಿಸಲು ಸೂಚಿಸಿದೆ.

ಅಧ್ಯಕ್ಷರು
ಕರ್ನಾಟಕ ಶಾಲಾ ಪರೀಕ್ಷೆ
ಮತ್ತು ಮೌಲ್ಯ ನಿರ್ಣಯ ಮಂಡಲಿ

**ರವರಿಗೆ.,**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ರವರಿಗೆ ಸೂಕ್ತ ಕ್ರಮಕ್ಕಾಗಿ ಹಾಗೂ **ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು.**

2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ **ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು**
3. ಹಿರಿಯ ಸಹಾಯಕ ನಿರ್ದೇಶಕರು, ಗಣಕ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಇವರಿಗೆ (**ಮಂಡಲಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ**).

<u>**ಪ್ರತಿಯನ್ನು:-**</u>

1. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ರವರಿಗೆ.
2. ನಿರ್ದೇಶಕರು, (ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ರವರಿಗೆ.
3. ಜಂಟಿ ನಿರ್ದೇಶಕರು (ಪಿ.ಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ರವರಿಗೆ.
4. ಉಪನಿರ್ದೇಶಕರು, (ಪಿ.ಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ರವರಿಗೆ.
5. ಹೆಚ್ಚುವರಿ/ಕಛೇರಿ ಪ್ರತಿ.